**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆಃ 68/2022**

ಪ್ರಾಸಾಃ 20
ಚಾಸಾಃ**23**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಸ್ಮಿತಾ ಜಿ. |
| ಗಂಡನ ಹೆಸರು | : | ಶಿವಮೂರ್ತಿ ಎಸ್. |
| ವಯಸ್ಸು | : | 46 ವರ್ಷ |
| ವೃತ್ತಿ | : | ಸೀನಿಯರ್ ಸೈಂಟಿಫಿಕ್ ಆಫೀಸರ್,FSL ಬೆಂಗಳೂರು, |
| ವಾಸ | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 14-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**(ವಿಡಿಯೋ ಕಾನ್ಫರೆನ್ಸ್ ಮುಖಾಂತರ)**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

1. ನಾನು 2014 ರಿಂದ 2019 ರವರೆಗೆ ಸೈಂಟಿಫಿಕ್ ಆಫೀಸರ್ ಆಗಿ ಆರ್. ಎಫ್.ಎಸ್.ಎಲ್., ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈಗ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಆರ್.ಎಫ್.ಎಸ್.ಎಲ್., ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2 ನಾನು ಎಂ.ಎಸ್.ಸಿ., ಪಿ.ಹೆಚ್.ಡಿ., ವ್ಯಾಸಂಗ ಮಾಡಿದ್ದು, 2014 ರಲ್ಲಿ ಆರ್.ಎಫ್.ಎಸ್.ಎಲ್., ಪ್ರಯೋಗಾಲಯಕ್ಕೆ ಸೇರಿದ್ದು, ಡೈರೆಕ್ಟರೇಟ್ ಆಫ್ ಫಾರೆನ್ಸಿಕ್ ಸೈನ್ಸ್ ನಲ್ಲಿ ಬೆಂಗಳೂರಿನಲ್ಲಿ ತರಬೇತಿ ಪಡೆದಿರುತ್ತೇನೆ. ನಾನು ಈವರೆಗೆ ಸುಮಾರು 300 ಪ್ರಕರಣಗಳಲ್ಲಿ ವರದಿ

ನೀಡಿದ್ದು, ಸುಮಾರು 50 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ.

[

3. ದಿನಾಂಕಃ 06-05-2022 ರಂದು ನಮ್ಮ ಕಛೇರಿಯ ಸ್ವಾಗತ ವಿಭಾಗದವರು ಮೊಕದಮ್ಮೆ ಸಂಖ್ಯೆಃ 27/2022 ಗೆ ಸಂಬಂಧಿಸಿದ 9 ಸೀಲಾದ ವಸ್ತುಗಳನ್ನು ಶನಿವಾರಂತೆ ಪೊಲೀಸ್ ಠಾಣೆಯ, ಪೊಲೀಸ್ ಪೇದೆ, ಆಕಾಶ್ ರವರಿಂದ ಸ್ವೀಕರಿಸಲಾಗಿದ್ದು, ಸದರಿ ವಸ್ತುಗಳನ್ನು ಸ್ವೀಕರಿಸಿ, ನೋಂದಾಣಿ ಮಾಡಿ RFSL/FLMS/BS/76/2022 ರಂತೆ ನಂಬರ್ ನೀಡಿ ಅವುಗಳನ್ನು ಜೀವಶಾಸ್ತ್ರ ವಿಭಾಗಕ್ಕೆ ಪರೀಕ್ಷೆಗಾಗಿ ಕಳುಹಿಸಿದ್ದರು. ಸದರಿ ವಸ್ತುಗಳ ಮೇಲೆ ಇದ್ದ ಸೀಲುಗಳು ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿದ್ದವು ಮತ್ತು ಸೀಲುಗಳು ಸುಸ್ಥಿತಿಯಲ್ಲಿ ಇದ್ದವು.

4. ನಾನು ದಿನಾಂಕಃ 23-05-2022 ರಿಂದ 27-05-2022 ರಂದು ಸದರಿ 9 ವಸ್ತುಗಳನ್ನು ಪರೀಕ್ಷಿಸಿದು, ಅವುಗಳ ವಿವರ ಈ ಕೆಳಗಿನಂತೆ ಇರುತ್ತದೆ.

5. ವಸ್ತು ಸಂಖ್ಯೆ-1 One plastic Mat, ವಸ್ತು ಸಂಖ್ಯೆ-2 One T-shirt, ವಸ್ತು ಸಂಖ್ಯೆ-3 One pant, ವಸ್ತು ಸಂಖ್ಯೆ-4 One shirt, ವಸ್ತು ಸಂಖ್ಯೆ-5 One pant, ವಸ್ತು ಸಂಖ್ಯೆ-6 One shirt, ವಸ್ತು ಸಂಖ್ಯೆ-7 One pant, ವಸ್ತು ಸಂಖ್ಯೆ-12 One shirt, ವಸ್ತು ಸಂಖ್ಯೆ-13 One pant ಇದ್ದವು. ಸದರಿ ಮೇಲೆ ಹೇಳಿದ ವಸ್ತುಗಳಿಗೆ IO marking ನಂಬರ್ ನೀಡಲಾಗಿರುತ್ತದೆ.

6. ಮೇಲೆ ಹೇಳಿದ ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ, ವಸ್ತುಸಂಖ್ಯೆಃ 1, 2, 3, 4, 5, 6, 7, 12 ಮತ್ತು 13 ರಲ್ಲಿ ರಕ್ತದ ಕಲೆಗಳು ಕಂಡು ಬಂದಿರುತ್ತದೆ. ವಸ್ತು ಸಂಖ್ಯೆ: 1, 2, 3, 4, 7, 12 ಮತ್ತು 13 ರಲ್ಲಿ ಇರುವ ರಕ್ತದ ಕಲೆಗಳು ಮಾನವ ಗುಂಪಿಗೆ ಸೇರಿದ ರಕ್ತದ ಕಲೆಗಳು ಆಗಿರುತ್ತದೆ. ವಸ್ತುಸಂಖ್ಯೆಃ 5 ಮತ್ತು 6 ರಲ್ಲಿ ಇರುವ ರಕ್ತ ಕಲೆಗಳು serology ಪರೀಕ್ಷೆಗೆ ಸಾಕಾಗಿರುವುದಿಲ್ಲ. ವಸ್ತು ಸಂಖ್ಯೆ: 1, 2, 3, 4, 7, 12 ಮತ್ತು 13 ರಲ್ಲಿ ಇರುವ ರಕ್ತದ ಕಲೆಗಳು 'ಎ' ಗುಂಪಿಗೆ ಸೇರಿದ್ದಾಗಿರುತ್ತದೆ.

7. ನನ್ನ ಪರೀಕ್ಷೆಗೆ ಸಂಬಂಧಿಸಿದಂತೆ ಡಿಜಿಟಲ್ ಸಹಿ ಮಾಡಿರುವ ನನ್ನ ವರದಿಯನ್ನು ನೀಡಿರುತ್ತದೇನೆ. ಈಗ ನಾನು ನೋಡುತ್ತಿರುವ ವರದಿ ನಾನು ನೀಡಿರುವ ವರದಿಯಾಗಿದ್ದು, ಅದನ್ನು ನಿಪಿ-38 ಎಂದು ಈಗಾಗಲೇ ಗುರುತಿಸಲಾಗಿದೆ.

8. ನಾನು ಪರೀಕ್ಷಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಸಾಕ್ಷಿ ನೋಡಿ ಗುರುತಿಸಿದ್ದ ಅದನ್ನು ಮು. ಮಾ 2 ರಿಂದ ಮು.ಮಾ-10 ಎಂದು ಗುರುತಿಸಲಾಗಿದೆ.

**<u>ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ ಬಿ.ಡಿ.ಕೆ. ವಕೀಲರಿಂದಃ</u>**

9. ನಾನು ಯಾವುದೇ ರೀತಿಯ ವೈಜ್ಞಾನಿಕ ಪರೀಕ್ಷೆಯನ್ನು ಮಾಡದೆ ಪೊಲೀಸರ ಕೋರಿಕೆಯ ಮೇರೆಗೆ ಒಂದು ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ